# ಕರ್ನಾಟಕ ವಿಧಾನ ಪರಿಷತ್

| | |
|---|---|
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1280 |
| ಉತ್ತರಿಸಬೇಕಾದ ದಿನಾಂಕ | 08.03.2022 |
| ಉತ್ತರಿಸಬೇಕಾದ ಸಚಿವರು | ನಗರಾಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಬುಡಾ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು; (ಅವುಗಳ ವಿಸ್ತೀರ್ಣ ಹಾಗೂ ಸ್ಥಿತಿಯ ಬಗ್ಗೆ ವಿವರ ನೀಡುವುದು) | ಬೀದರ್ ನಗರದಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಒಟ್ಟು 7 ಕೆರೆಗಳು ಇರುತ್ತವೆ. ಸದರಿ ಕೆರೆಗಳ ವಿಸ್ತೀರ್ಣ ಈ ಕೆಳಗಿನಂತಿವೆ.<br>1. ಪಾಪನಾಶ ಕೆರೆ – 41860.87 ಚ.ಮೀ.<br>2. ಬೋಮ್ಮಗೊಂಡೇಶ್ವರ ಕೆರೆ – 24444.63 ಚ.ಮೀ.<br>3. ಹಳ್ಳದಕೇರಿ (ಕೆ) ಕೆರೆ – 293104.00 ಚ.ಮೀ.<br>4. ನಿಜಾಂಪುರ ಕೆರೆ – 27009.4 ಚ.ಮೀ.<br>5. ಮಿರ್ಜಾಪುರ ಕೆರೆ – 102362.00 ಚ.ಮೀ.<br>6. ಕುಂಬಾರವಾಡ ಕೆರೆ – 2998.00 ಚ.ಮೀ.<br>7. ಚಿದ್ರಿ ಕೆರೆ – 40606.47 ಚ.ಮಿ. |
| ಆ) | ಹಲವು ಕೆರೆಗಳು ಒತ್ತುವರಿಯಾಗಿರುವ ಹಾಗೂ ಇದ್ದ ಕೆರೆಗಳಲ್ಲಿ ಚರಂಡಿ ನೀರು ಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆರೆದುಕೊಂಡ ಕ್ರಮವೇನು; | ಹಳ್ಳದಕೇರಿ (ಕೆ) ಕೆರೆಗೆ ಸಂಬಂಧಿಸಿದಂತೆ ದಿನಾಂಕ 17.06.2021 ರಂದು ಜರುಗಿನ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 41(2)ರ ನಿರ್ಣಯದಂತೆ ಕಾರ್ಯದರ್ಶಿಗಳು, ಶಾಹೀನ ಶಿಕ್ಷಣ ಸಂಸ್ಥೆ, ಬೀದರ ಇವರಿಗೆ ನೋಟಿಸು ಜಾರಿ ಮಾಡಲಾಗಿರುತ್ತದೆ. ಸದರಿ ಕೆರೆಯ ಪ್ರದೇಶವನ್ನು ಹಾಗೂ ನಾಲಾಗಳನ್ನು ಗುರುತಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿರುತ್ತದೆ. |

| | | |
|---|---|---|
| ಇ) | ಜಿಲ್ಲೆಯ ಪ್ರವಾಸೋದ್ಯಮ ಬೆಳೆಸಲು ಈ ಕೆರೆಗಳ ಅಭಿವೃದ್ಧಿ ಮಾಡುವ ಯೋಜನೆಯೇನಾದರೂ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಯೋಜನೆ ರೂಪಿಸಲಾಗುವುದು; ಇಲ್ಲವಾದಲ್ಲಿ ಕಾರಣ ನೀಡುವುದು? | ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಕೆರೆ ಅಭಿವೃದ್ಧಿ ಶುಲ್ಕದಿಂದ ಪಾಪನಾಶ ಕೆರೆಯನ್ನು ಅಭಿವೃದ್ಧಿಪಡಿಸಲು ದಿನಾಂಕ 17.06.2021 ರಂದು ಜರುಗಿದ ಪ್ರಾಧಿಕಾರದ ಸಭೆಯಲ್ಲಿ ಅಂದಾಜು ಪತ್ರಿಕೆಯನ್ನು ತಯಾರಿಸಿ ಮುಂಬರುವ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲು ನಿರ್ಣಯಿಸಲಾಗಿರುತ್ತದೆ. |

ಸಂಖ್ಯೆ: ನಅಇ 48 ಗುಅಪ್ರಾ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು